ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗೆ ವಹಿಸಲಾಗಿದೆ. ಕಾಮಗಾರಿ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

2) ಕಾರವಾರ ಪ್ರವಾಸಿ ಸಂಕೀರ್ಣದ ಕಾಮಗಾರಿ ಕರ್ನಾಟಕ ಭೂ ಸೇನಾ ನಿಗಮ ಸಂಸ್ಥೆಗೆ ವಹಿಸಲಾಗಿದ್ದು, ಕೆಲಸ ಪ್ರಗತಿಯಲ್ಲಿದೆ. ಇದುವರೆಗೆ ರೂ. 13.00 ಲಕ್ಷ ವೆಚ್ಚವಾಗಿರುತ್ತದೆ. ಜೂನ್ 99ರಲ್ಲಿ ಪೂರ್ಣ ಗೊಳಿಸಲಾಗುವುದು.

3) ದೇವಬಾಗ್‌ನಲ್ಲಿ ಕಾಟೇಜ್‌ಗಳನ್ನು ನಿರ್ಮಿಸಲಾಗುವ ಕಾರ್ಯ ಮೆ: ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಜನವರಿ 99ರಲ್ಲಿ ಪೂರ್ಣಗೊಳಿಸಲಾಗುವುದು.

ಮಡಿಕೇರಿ ತಾಲ್ಲೂಕಿನಲ್ಲಿ ಅಕ್ರಮವಾಗಿ ಅರಣ್ಯ ಮರಗಳನ್ನು ಕಡಿಯುವಿಕೆ.

556: (3894)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಕೇರಿ ತಾಲ್ಲೂಕಿನ ಕೋಪಟ್ಟಿಯ ಸರ್ಕಾರಿ ಅರಣ್ಯದಲ್ಲಿ ಅಕ್ರಮವಾಗಿ ಒಟ್ಟು ಎಷ್ಟು ಮೌಲ್ಯದ ಮರಗಳನ್ನು ಕಡಿಯಲಾಗಿದೆ?

ಆ) ಅಕ್ರಮ ಮರ ಕಡಿತಲೆಯ ಈ ಪ್ರಕರಣದ ತನಿಖೆ ಈಗ ಯಾವ ಹಂತದಲ್ಲಿದೆ?

ಇ) ಅಪರಾಧಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ. ಇವರಿಂದ ವಸೂಲು ಮಾಡಿದ ಮರದ ಮೌಲ್ಯ ಮತ್ತು ದಂಡದ ಮೊತ್ತವೆಷ್ಟು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಆಗಿನ ಮಾರ್ಕೆಟ್ ದರ ಲೆಕ್ಕಚಾರದಂತೆ 1,77,63,172.00 ರೂಪಾಯಿ ಮೌಲ್ಯದ ಮರಗಳನ್ನು ಕಡಿಯಲಾಗಿದೆ.

ಆ) ಅಕ್ರಮ ಮರಗಳ ಕಡಿತಲೆಯ ಈ ಪ್ರಕರಣ ಪ್ರಸಕ್ತ ಸರ್ಕಾರಿ ಆದೇಶ ಸಂಖ್ಯೆ ಓಇ 130 ಸಿಓಡಿ 98 ಬೆಂಗಳೂರು ದಿನಾಂಕ 13-8-98 ಆದೇಶದನ್ವಯ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಸಿಓಡಿ ಮತ್ತು ತರಬೇತಿ, ಬೆಂಗಳೂರು ಇವರ ನೇತೃತ್ವದಲ್ಲಿ ತನಿಖಾ ಹಂತದಲ್ಲಿ ಇದೆ.

ಇ) ಸರ್ಕಾರದ ನಷ್ಟಪ ಹಣವನ್ನು ಕೂಡಲೇ ಪಾವತಿಸುವಂತೆ ಆರೋಪಿ ಶ್ರೀಮತಿ ಡೈಸಿ ಜಾಕಬ್ ರವರಿಗೆ ಷೋಕಾಸ್ ನೋಟೀಸು ಜಾರಿ ಮಾಡಲಾಗಿದೆ. ಆದರೆ ಆರೋಪಿಯು ಈವರೆಗೆ ಹಣವನ್ನು ಪಾವತಿಸದಿರುವುದರಿಂದ ಇವರ ವಿರುದ್ಧ ನ್ಯಾಯಾಲಯದಲ್ಲಿ ಸಿವಿಲ್ ದಾವಾ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯ ಕ್ರಮಗಳು

557:(3863)

ಶ್ರೀ ಎಚ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲೂಕಿನಲ್ಲಿ 1998-99ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಲ್ಲಿಯವರೆಗೆ ಕೈಗೊಂಡ ಕಾರ್ಯ ಕ್ರಮಗಳು ಹಾಗೂ ಯೋಜನೆಗಳು ಯಾವುವು?

ಆ) ಈ ತಾಲೂಕಿನಲ್ಲಿ ಕಲಾ ಭವನ ಅಥವಾ ರಂಗಮಂದಿರ ನಿರ್ಮಿಸಲು ಉದ್ದೇಶಿಸಿದೆಯೇ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು):

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.